# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:— ಆರಾಧನಾ ಯೋಜನೆಯಡಿಯಲ್ಲಿ ಕೆಲವು ಹಿಂದುಳಿದ ವರ್ಗಗಳನ್ನು ಸೇರಿಸಿಕೊಳ್ಳುವ ಬಗ್ಗೆ (ಸಮುದಾಯ — ಎ)

ಓದಲಾಗಿದೆ :— 1. ಸರ್ಕಾರಿ ಆದೇಶ ಸಂ.ಕಂಇ 104 ಮುಜರಾಯಿ 91 ದಿನಾಂಕ 10-7-1991

2. ಪತ್ರ ಸಂ.ಮುಜರಾಯಿ ಸಿಆರ್ 323:90-91 ದಿನಾಂಕ 19-8-92 ಧಾರ್ಮಿಕ ದತ್ತಿ ಆಯುಕ್ತರು ಬೆಂಗಳೂರು ಇವರಿಂದ.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂ.(1)ರ ಸರ್ಕಾರಿ ಆದೇಶದಲ್ಲಿ 1991-92ನೇ ಸಾಲಿನಲ್ಲಿ "ಆರಾಧನಾ" ಎನ್ನುವ ಹೊಸ ಯೋಜನೆಯನ್ನು ಜಾರಿಗೆ ತರಲಾಗಿದೆ.

ಮೇಲೆ ಓದಲಾದ ಕ್ರಮ ಸಂ.(2)ರ ಪತ್ರದಲ್ಲಿ ಧಾರ್ಮಿಕ ದತ್ತಿ ಆಯುಕ್ತರು ಈ ಯೋಜನೆಯಲ್ಲಿ "ಹರಿಜನಕೇರಿ" ಪಕ್ಕದ ಕೇರಿ ಮತ್ತು "ಲಂಬಾಣಿ" ತಾಂಡಗಳಿಗೆ ದೇವಾಲಯದ ಜೀರ್ಣೋದ್ಧಾರ:ರಿಪೇರಿ ಮತ್ತು ನವ ನಿರ್ಮಾಣಕ್ಕೆ ಧನ ಸಹಾಯವನ್ನು ನೀಡಲು ಮೇಲ್ಕಾಣಿಸಿದ ಸರ್ಕಾರಿ ಆದೇಶದಲ್ಲಿ ಆದೇಶಿಸಿದ್ದು, ಆರಾಧನಾ ಯೋಜನೆಯ ಬಗ್ಗೆ ಸರ್ಕಾರದ ಮಟ್ಟದಲ್ಲಿ ದಿನಾಂಕ 24-8-92ರ ಸಭೆಯಲ್ಲಿ ಮರುಪರಿಶೀಲಿಸಿದ ಸಂದರ್ಭದಲ್ಲಿ ಈ ಯೋಜನೆಯನ್ನು ಇತರೆ ಹಿಂದುಳಿದ ವರ್ಗಗಳಾದ ಸರ್ಕಾರಿ ಆದೇಶ ಸಂ.ಎಸ್‌ಡಬ್ಲ್ಯೂಎಲ್ 66 ಬಿಸಿಎ 86 ದಿನಾಂಕ 13-10-86ರ (ಅನುಬಂಧ — 1 ಭಾರತ ಸಂವಿಧಾನದ 15(4)ನೇ ಅನುಚ್ಛೇದ" ಅನುಬಂಧ — 2 ಭಾರತ ಸಂವಿಧಾನದ 16(4)ನೇ ಅನುಚ್ಛೇದ ಸಮುದಾಯ "ಎ" (ಹಿಂದುಳಿದ ಬುಡಕಟ್ಟುಗಳು) ಕ್ರ.ಸಂ.1 ರಿಂದ 61ರ ವರೆಗಿನ ಸಮುದಾಯದ ಜನಾಂಗಕ್ಕೂ ಈ ಯೋಜನೆಯನ್ನು ವಿಸ್ತರಿಸುವಂತೆ ಶಿಫಾರಸ್ಸು ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

**ಸರ್ಕಾರಿ ಆದೇಶ ಸಂಖ್ಯೆ ಕಂಇ 410 ಮುಜರಾಯಿ 92, ಬೆಂಗಳೂರು, ದಿನಾಂಕ: 28-11-92.**

ಧಾರ್ಮಿಕ ದತ್ತಿ ಆಯುಕ್ತರು ಬೆಂಗಳೂರು ಇವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ಯೋಜನೆಯನ್ನು ಇತರೆ ಹಿಂದುಳಿದ ವರ್ಗಗಳಾದ ಸರ್ಕಾರಿ ಆದೇಶ ಸಂ.ಎಸ್‌ಡಬ್ಲ್ಯೂಎಲ್ 66 ಬಿಸಿಎ 86 ದಿನಾಂಕ 13-10-86ರ (ಅನುಬಂಧ — 1 ಭಾರತ ಸಂವಿಧಾನದ 15(4)ನೇ ಅನುಚ್ಛೇದ" ಅನುಬಂಧ — 2 ಭಾರತ ಸಂವಿಧಾನದ 16(4)ನೇ ಅನುಚ್ಛೇದ ಸಮುದಾಯ "ಎ" (ಹಿಂದುಳಿದ ಬುಡಕಟ್ಟುಗಳು) ಕ್ರ.ಸಂ.1 ರಿಂದ 61ರ ವರೆಗಿನ ಸಮುದಾಯದ ಜನಾಂಗಕ್ಕೂ ಈ ಯೋಜನೆಯ ಸವಲತ್ತುಗಳನ್ನು ದೊರಕಿಸಲು ಸರ್ಕಾರ ಅನುಮತಿಯನ್ನು ನೀಡಲಾಗಿದೆ. (ಅನುಬಂಧವನ್ನು ಈ ಆದೇಶದೊಂದಿಗೆ ಲಗತ್ತಿಸಲಾಗಿದೆ).

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ.

ಸಹಿ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ.

"ನಕಲು"

ಸಂಖ್ಯೆ: ಮುಜನ ಸಿಆರ್ 253:92-93

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಹಾಸನ ಜಿಲ್ಲೆ,
ಹಾಸನ, ದಿನಾಂಕ: 26-2-1993

ಆದೇಶದ ಪ್ರತಿಯನ್ನು ಜಿಲ್ಲೆಯ ಎಲ್ಲಾ ತಹಶೀಲ್ದಾರರವರಿಗೂ ರವಾನಿಸಿದೆ. ಸರ್ಕಾರದ ಸೂಚನೆಯಂತೆ ಅಗತ್ಯ ಪಟ್ಟಿಯಲ್ಲಿರುವ ಜನಾಂಗದವರ ವಾಸ ಸ್ಥಳಗಳಲ್ಲಿಯೂ ಕೂಡ ಆರಾಧನಾ ಯೋಜನೆಯಡಿ ದೇವಸ್ಥಾನ ನಿರ್ಮಾಣ ದುರಸ್ತಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ